**ಸಾಕ್ಷಿಗೆ ದಿನಾಂಕಃ08-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ರಿಂದ 4 ನೇ ಪ್ರತಿವಾದಿ ಪರ ಶ್ರೀ. ಎಂ ಎಲ್ ವಕೀಲರಿಂದ ::**

2 ನೇ ಪ್ರತಿವಾದಿ ಓಂಕಾರಪ್ಪ ನನ್ನ ತಂದೆ. 2 ನೇ ಪ್ರತಿವಾದಿಯು ಕೋರನಹಳ್ಳಿಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. ನನ್ನ ತಾಯಿಯ ಊರು ಚಿಕ್ಕಮಗಳೂರಿನ ಕ್ಯಾತನಬೀಡು ಗ್ರಾಮ ಆಗಿರುತ್ತದೆ. ನನ್ನ ತಾಯಿ ಹೆರಿಗೆ ಸಮಯದಲ್ಲಿ ಅವರ ಗ್ರಾಮಕ್ಕೆ ಹೋಗಿದ್ದರು ಎಂದರೆ ಸರಿ. ನಾನು ಹುಟ್ಟಿದಾಗಿನಿಂದ ಕೋರನಹಳ್ಳಿಯಲ್ಲಿ ವಾಸ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಗಾಗ ಬಂದು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಆ ರೀತಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯ ಜೊತೆ ಯಾವತ್ತು ವಾಸ ಮಾಡಿಕೊಂಡಿರಲಿಲ್ಲ ಎಂದರೆ ಸರಿ, ಕಾರಣ ಅವರು ನನ್ನನ್ನು ಮನೆಗೆ ಸೇರಿಸುತ್ತಿರಲಿಲ್ಲ. ಆ ರೀತಿ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳ ಚಿತ್ತಾವಣೆ ಮೇರೆಗೆ ನಾನು ಈ ದಾವೆಯಲ್ಲಿ ನಂತರದಲ್ಲಿ ಬಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ವಾದಿಗಳೇ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಅಜ್ಜ ಚಂದ್ರಪ್ಪ ರವರಿಗೆ ಅವರ ತಾಯಿ ನಂಜಮ್ಮ ರವರಿಂದ ಬಂದ ಆಸ್ತಿಯಾಗಿದ್ದು ಅದು ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ಚಂದ್ರಪ್ಪ ರವರನ್ನು ಹೊರತುಪಡಿಸಿ ಇತರೇ ಯಾವುದೇ ವ್ಯಕ್ತಿಗಳಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರಪ್ಪ ತನ್ನ ಜೀವಿತಾ ಅವಧಿಯಲ್ಲಿಯೇ ಕಾನೂನು ಬದ್ಧವಾಗಿ 4 ನೇ ಪ್ರತಿವಾದಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಪ್ರಶ್ನೆ ಮಾಡಲು ವಾದಿಗೆ ಮತ್ತು ಇತರೇ ಪ್ರತಿವಾದಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು ನಂತರದಲ್ಲಿ 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಹಾಗೂ 3 ನೇ ಪ್ರತಿವಾದಿ ತಂದೆ ನಂಜುಂಡಪ್ಪ ರವರಿಗೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಚಂದ್ರಪ್ಪ ಅವರಿಗೆ ತಲಾ 25 ಸಾವಿರ ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ಚಿತ್ತಾವಣೆ ಮೇರೆಗೆ ಸುಳ್ಳು

ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಪಾಟೀ ಸವಾಲು :: 5 ನೇ ಪ್ರತಿವಾದಿ ಪರ ಶ್ರೀ. ಬಿ ಟಿ ಕೆ ವಕೀಲರಿಂದ ::**

ನಾನು ಪ್ರಸ್ತುತದಲ್ಲಿ ಕ್ಯಾತನಬೀಡುವಿನಲ್ಲಿ ವಾಸ ಮಾಡಿಕೊಂಡಿರುತ್ತೇನೆ. ನನ್ನ ತಂದೆಯನ್ನು ನಾನು ಇವರೆಗೂ ನೋಡಿರುವುದಿಲ್ಲ. ನನ್ನ ತಂದೆ ಕೋರನಹಳ್ಳಿಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. ನನ್ನ ಅಜ್ಜಿ ಶಾರದರವರು ಪಿಳ್ಳೆನಹಳ್ಳಿಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. ನಮ್ಮ ಮನೆಗೆ ನಮ್ಮ ತಂದೆ ಮತ್ತು ಅವರ ಕುಟುಂಬಸ್ಥರು ಇಲ್ಲಿಯವರೆಗೂ ಬಂದಿರುವುದಿಲ್ಲ ಎಂದರೆ ಸರಿ. ನನ್ನ ತಂದೆಗೆ ಪಾಶ್ರುವಾಯು ಆಗಿರುತ್ತದೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಯಾರೆಂದು ನನಗೆ ಗೊತ್ತಿಲ್ಲ. ಅವರ ಭಾಗದ ಹಣ ಪಡೆದುಕೊಂಡು ಸಹಿ ಹಾಕಿದ ಕಾರಣ ನನಗೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಎದುರಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಅಜ್ಜಅಜ್ಜಿಗೆ ಹಿರಿಯ ಮಗ ಆಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿ ಶಾರದಮ್ಮ ರವರ ಜೊತೆ ನನ್ನ ತಂದೆ ಮೊದಲಿನಿಂದ ವಾಸ ಮಾಡುತ್ತಿದ್ದ ಕಾರಣ ನನ್ನ ತಂದೆಗೆ ಕುಟುಂಬದ ವ್ಯವಹಾರ ತಿಳಿದಿತ್ತು ಎಂದರೆ ಸರಿ. ನಮ್ಮ ಕುಟುಂಬದ ಸಾಲವನ್ನು ತಿರುವಳಿ ಮಾಡಲು ನ್ಯಾಯಾಲಯದಿಂದ ನಮ್ಮ ಕುಟುಂಬದ ಮನೆ ಹರಾಜಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕುಟುಬಂದ ಸಾಲ ತೀರಿಸಲು 5 ನೇ ಪ್ರತಿವಾದಿಗೆ ದಾವಾ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ ನಂತರದಲ್ಲಿ 5 ನೇ ಪ್ರತಿವಾದಿ ಲಕ್ಷಾಂತರ ರೂಪಾಯಿ ಬಂಡವಾಳ ಹೂಡಿ ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ಚಿತ್ತಾವಣೆ ಮೇರೆಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಇನ್ನು ಎರಡು ಎಕರೆ ಜಮೀನು ಉಳಿದಿರುತ್ತದೆ ಎಂದರೆ ಸರಿ. ಸದರಿ ಜಮೀನಿನ ಖಾತೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: